ಓಎಸ್ **130/2017**
ಪಿಡಬ್ಲ್ಯು **1**



<u>ದಿನಾಂಕಃ **13-07-2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.
ಪ್ರತಿವಾದಿ ಪರ ಮುಂದುವರೆದ ಪಾಟೀ ಸವಾಲು ಶ್ರೀ ಕೆ ವಿ ಎಂ ವಕೀಲರಿಂದಃ-</u>

1) 1 ನೇ ಪ್ರತಿವಾದಿ ಅವರ ದೊಡ್ಡಪ್ಪ ಸೋಮಪ್ಪನ ಮಗ ಈರಪ್ಪ ಅವರ ಮಧ್ಯೆ ಹಿಂದೆ ಹಿಸ್ಸೆ ಆಗಿ 1 ನೇ ಪ್ರತಿವಾದಿಗೆ 31 ವರೆ ಗುಂಟೆ ಹಾಗೂ ಈರಪ್ಪನಿಗೆ 31 ವರೆ ಗುಂಟೆ ಎಂ ಆರ್ ನಂ 7/1994-95 ರಂತೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಸೋಮಪ್ಪ , ಮಲ್ಲಪ್ಪ , ಗಂಗಪ್ಪ ಅವರ ಮಧ್ಯೆದಲ್ಲಿ ಸರ್ವೆ ನಂ 156 ರಲ್ಲಿ ಪಾಲು ಆಗಿದೆ ಎಂದು ಹೇಳುತ್ತಾರೆ. ಅದೇ ರೀತಿ 1 ನೇ ಪ್ರತಿವಾದಿ ಮತ್ತು ಈರಪ್ಪನ ಹೆಸರು ಪಹಣಿ ಪತ್ರಿಕಯಲ್ಲಿ ಇವೆ ಎಂದರೆ ಸಾಕ್ಷಿಯು ಗೊತ್ತಾಗದಂತೆ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಈರಪ್ಪ ನು ಸೋಮಪ್ಪನ ಮಗ ಎಂದರೆ ಸರಿ.

2) 1969-70, 1970-71, 1972-73 ನೇ ಇಸವಿಯ ಪಹಣಿ ಪತ್ರಿಕೆಯಲ್ಲಿ ಕೈ ತಪ್ಪಾಗಿ ಒಬ್ಬ ಗಂಗಪ್ಪನ ಹೆಸರು ಬಂದಿತ್ತು ಎಂದರೆ ಸರಿಯಲ್ಲ. ಗಂಗಪ್ಪ ನನ್ನ ತಂದೆ ಎಂದು ಹೇಳುತ್ತಾರೆ. ಕೈ ತಪ್ಪಿನಿಂದ ಗಂಗಪ್ಪನ ಹೆಸರು ಬಂದಿದ್ದನ್ನು ನನ್ನ ತಂದೆ ಎಂದು ಹೇಳಿ ಸುಳ್ಳು ದಾವೆ ಹಾಕಿದ್ದೀರಿ ಎಂದರೆ ಸರಿಯಲ್ಲ. ಗಂಗಪ್ಪನ ತಂದೆ ಹೆಸರು ಈರಪ್ಪ. ಸದರಿ ಮೂರು ವರ್ಷಗಳ ಪಹಣಿ ಪತ್ರಿಕೆಗಳಲ್ಲಿ ಗಂಗಪ್ಪನ ತಂದೆ ಹೆಸರು ಬಂದಿಲ್ಲ ಎಂದರೆ ಸರಿ.

3) 1 ನೇ ಪ್ರತಿವಾದಿಯ 31 ಗುಂಟೆ ಜಮೀನಿನ ಚಕ್ಕುಬಂದಿಗಳು ಪೂರ್ವಕ್ಕೆ ಇದೇ ನಂಬರಿನಲ್ಲಿ ಕಲ್ಲಪ್ಪನ ಜಮೀನು ಇರುತ್ತದೆ ಎಂದರೆ ಸಾಕ್ಷಿ ಕೆರೆ ಇರುತ್ತದೆ ಎನ್ನುತ್ತಾರೆ. ಪಶ್ಚಿಮಕ್ಕೆ ಶಿವನಗೌಡ ಮತ್ತು ಶಿವಾನಂದಪ್ಪನವರ ಜಮೀನು ಇರುತ್ತದೆ ಎಂದರೆ ಸರಿ . ಉತ್ತರಕ್ಕೆ

ಸೋಮಪ್ಪನ ಮಗನಾದ ಈರಪ್ಪನ ಜಮೀನು ಇದೆ ಎಂದರೆ ಸರಿಯಲ್ಲ ನೀರಿನ ಕಾಲುವೆ ಇರುತ್ತದೆ ಎನ್ನುತ್ತಾರೆ. ದಕ್ಷಿಣಕ್ಕೆ ಪ್ರಭು ಗೌಡ ಮತ್ತು ಶಾಂತನಗೌಡನ ಜಮೀನು ಇರುತ್ತವೆ ಎಂದರೆ ಸರಿ.

4) ಪ್ರತಿವಾದಿಗಳು ಸುಮಾರು 4 ವರ್ಷಗಳ ಹಿಂದೆ ನನ್ನ ಜಮೀನಿಗೆ ತೊಂದರೆ ಕೊಟ್ಟಿರುತ್ತಾರೆ ನಿಖರವಾಗಿ ದಿನಾಂಕ ಹೇಳಲು ಆಗುವುದಿಲ್ಲ. ನಾನು ನಾಟಿ ಮಾಡಲಿಕ್ಕೆ ರಂಟೆ ಹೊಡೆಯುತ್ತಿದ್ದೆ ಆಗ ತೊಂದರೆ ಮಾಡಿರುತ್ತಾರೆ. ಸುಮಾರು ಸಮಯ 3 ಗಂಟೆ ಆಗಿತ್ತು. ಜನ ಯಾರೂ ಇರಲಿಲ್ಲ. ನನ್ನ ತಂದೆಯಾಗಲೀ ಅಥವಾ ನಾನಾಗಲೀ ದಾವಾ ಸ್ವತ್ತಿನ ಯಾವತ್ತೂ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮರದ ಕುಟುಂಬಕ್ಕೆ ಸಂಬಂಧಿಸಿದ್ದು ಎಂದರೆ ಸಾಕ್ಷಿ ನಾನೇ ಮರದ ಕುಟುಂಬದ ಸದಸ್ಯ ಎಂದು ಹೇಳುತ್ತಾರೆ. ನಾನು ಮರದ ಮನೆತನದವನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತಿನ ಜೊತೆ ಯಾವುದೇ ಸಂಬಂಧ ಇಲ್ಲ ಇದ್ದರೂ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆ ಬೆರಳಚ್ಚು ಮಾಡಲಾಯಿತು. )

ಓ.ಹೇ.ಕೇ.ಸರಿ.ಇದೆ.

2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ .ಎಂ.ಎಫ್.ಸಿ. ಶಿಕಾರಿಪುರ.

**ಓಎಸ್   130/2017**
**ಪಿಡಬ್ಲ್ಯು 1**

**ಓಎಸ್ 130/2017**
**ಪಿಡಬ್ಲ್ಯು 1**

ಪ್ರತಿವಾದಿಗಳು ಮತ್ತು ಪ್ರತಿವಾದಿ ಪರ ವಕೀಲರುಗೈರು ಹಾಜರಿದ್ದು ಪಾಟೀ ಸವಾಲು ಮುಂದೂಡಲು ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.